**ದಿನಾಂಕಃ 30.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : 1 ನೇ ಪ್ರತಿವಾದಿಯ ಪರ ವಕೀಲರಿಂದಃ**

3. ಕಳೆದ ಬಾರಿ ಪಾಟೀಸವಾಲಿನಲ್ಲಿ ಪಟ್ಟಾ ಹಾಜರು ಮಾಡುತ್ತೇನೆ ಎಂದು ಹೇಳಿದ್ದು, ಈ ದಿನ ಪಟ್ಟಾ ಹಾಜರು ಮಾಡುತ್ತಿದ್ದೀನಾ? ಎಂದರೆ ತಂದಿಲ್ಲ. ಪಟ್ಟಾವನ್ನು ಯಾಕೆ ತಂದಿಲ್ಲ? ಎಂದರೆ ನಾನು ಮಗಳ ಊರಿಗೆ ಹೋಗಿದ್ದೆ, ನನ್ನ ಊರಿಗೆ ವಾಪಸ್ಸು ಹೋಗದೇ ಮಗಳ ಊರಿನಿಂದ ನೇರವಾಗಿ ಕೋರ್ಟಿಗೆ ಬಂದಿದ್ದರಿಂದ ಪಟ್ಟಾವನ್ನು ತಂದಿಲ್ಲ. ನನಗೆ ದಾವಾ ಸ್ವತ್ತಿನ ಪಟ್ಟಾವನ್ನು ಕೊಟ್ಟೇ ಇಲ್ಲವಾದ್ದರಿಂದ ಅದನ್ನು ತಂದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಟ್ಟಾದಲ್ಲಿ ದಾವಾ ಸ್ವತ್ತಿನ ಚೆಕ್ಕುಬಂದಿ ಏನೆಂದು ನಮೂದಿಸಿದ್ದಾರೆ? ಎಂದರೆ ನನಗೆ ಓದಲು ಬರೆಯಲು ಬರುವುದಿಲ್ಲವಾದ್ದರಿಂದ ಚೆಕ್ಕುಬಂದಿ ಬಗ್ಗೆ ಗೊತ್ತಿಲ್ಲ. ಪಟ್ಟಾ ಪ್ರಕಾರ ಯಾವ ದಿಕ್ಕಿಗೆ ಯಾರ ಆಸ್ತಿ ಇದೆ ಎಂದು ಹೇಳಲು ಆಗುತ್ತದೆಯೇ? ಎಂದರೆ ನನಗೆ ಹೇಳಲು ಆಗುವುದಿಲ್ಲ, ನನ್ನ ಮಗನಿಗೆ ಗೊತ್ತಿದೆ. ಪಟ್ಟಾದಲ್ಲಿ ಇರುವ ಚೆಕ್ಕುಬಂದಿ ಮತ್ತು ದಾವೆಯಲ್ಲಿ ಹಾಜರು ಮಾಡಿದ ಖಾತಾ ನಕಲಿನಲ್ಲಿ ಇರುವ ಚೆಕ್ಕುಬಂದಿ ಒಂದೇ ಇದೆಯೇ? ಅಥವಾ ಬೇರೆ ಬೇರೆ ಇರುತ್ತದೆಯೇ? ಎಂದರೆ ಎರಡೂ ಬೇರೆ ಬೇರೆ ಇರುತ್ತದೆ. ಖಾತಾ ನಕಲಿನಲ್ಲಿ ನಮೂದಾಗಿರುವ ಡೋರ್ ನಂಬರ್ ಏನು? ಎಂದರೆ ನನಗೆ ಓದಲು ಬರುವುದಿಲ್ಲ. ಪ್ರತಿವಾದಿಯು ಯಾವಾಗ ಬಂದು ಕಟ್ಟಡ ಕಟ್ಟಿದ್ದಾನೆ? ಎಂದರೆ 5 ವರ್ಷಗಳ ಹಿಂದೆ ಕಟ್ಟಿದ್ದಾನೆ.

4. 1 ನೇ ಪ್ರತಿವಾದಿಯ ಡೋರ್ ನಂ. 138 ಎಂದರೆ ನಾನು ವಿದ್ಯಾಭ್ಯಾಸ ಮಾಡಿಲ್ಲವಾದ್ದರಿಂದ ನನಗೆ ಗೊತ್ತಿಲ್ಲ. ನನ್ನ ಮಗ ಕೋರ್ಟಿಗೆ ಬಂದರೆ ಅದರ ಬಗ್ಗೆ ಹೇಳಬಲ್ಲ. ಗ್ರಾಮ ಪಂಚಾಯತಿಯವರು 1 ನೇ ಪ್ರತಿವಾದಿಯ ಹೆಂಡತಿ ಹೆಸರಿಗೆ ಮನೆ ಕಟ್ಟಿಸಲು ಪರಿಶಿಷ್ಟ ಜಾತಿ ಮತ್ತು ಪಂಗಡದ ಯೋಜನೆಯಲ್ಲಿ ಅನುಮತಿ ಕೊಟ್ಟಿದ್ದಾರೆ ಎಂದರೆ ಸರಿ. 2017 ರಿಂದಲೂ 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಮಕ್ಕಳು ಅವರಿಗೆ ಕೊಟ್ಟಿರುವ ಜಾಗದಲ್ಲೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸರ್ಕಾರದವರು ಪೂರ್ವ-ಪಶ್ಚಿಮ 50 ಅಡಿ ಮತ್ತು ಉತ್ತರ-ದಕ್ಷಿಣ 35 ಅಡಿ ನಿವೇಶವನ್ನು ನೀಡಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಸರ್ಕಾರದವರು ನೀಡಿರುವ ಜಾಗದಲ್ಲೇ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದರೂ ನನ್ನ ಜಾಗವನ್ನು ಅತಿಕ್ರಮಣ ಮಾಡಿ ಕಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೋರ್ಟಿಗೆ ಹಾಜರು ಮಾಡಿರುವ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಈ ದಾವೆಯ ಬಗ್ಗೆ ವಕೀಲರಿಗೆ ನನ್ನ ಮಗನೇ ಎಲ್ಲಾ ಮಾಹಿತಿ ಕೊಟ್ಟಿದ್ದಾನೆ ಎಂದರೆ ಸರಿ. ಆದ್ದರಿಂದ ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ನನಗೆ ಓದಲು ಬರುವುದಿಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.